ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಹಾಲಿ ಮಂಜೂರಾಗಿರುವ ಯೋಜನೆಯ ಪ್ರಕಾರ ಹಾಸನ ತಾಲ್ಲೂಕಿನ ಪ್ರದೇಶಕ್ಕೆ ನೀರನ್ನು ಕೊಡುವ ವ್ಯವಸ್ಥೆ ಇರುವುದಿಲ್ಲ. ಇದರ ಬಗ್ಗೆ ಮನವಿ ಬಂದಿದ್ದು ಪರಿಶೀಲಿಸಲಾಗುತ್ತಿದೆ.

ಆ) ತಯಾರಾಗಿದೆ.

ಇ) 86 ಲಕ್ಷ ರೂ.ಗಳು

ಈ) ಹಾಸನ ತಾಲ್ಲೂಕಿನ ಈ ಕೆಳಕಂಡ ಹಳ್ಳಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಅಂದಾಜಿನಲ್ಲಿ ಪ್ರಸ್ತಾವನೆ ಮಾಡಲಾಗಿದೆ.

1) ನಾಗೇನಹಳ್ಳಿ, 2) ಮರ್ಕೂಲ್, 3) ದುಮ್ಮಿಗೆರೆ, 4) ಮಕ್ಕುಲಿಕೊಪ್ಪಲು, 5) ಕಲ್ಲುಗಡನ ಹಳ್ಳಿ, 6) ಮುತ್ತಿಗೆ, 7) ಉಳ್ಳವಾರೆ.

ಒಂದೊಂದು ಹಳ್ಳಿಯಲ್ಲೂ ಎಷ್ಟೆಷ್ಟು ಎಕರೆಗೆ ನೀರೊಡಗಿಸಲು ಸಾಧ್ಯವಾಗುವುದು ಎಂಬ ವಿವರಗಳು ವಿವರವಾದ ಸರ್ವೆ ಕೆಲಸ ಮಾಡಿದ ನಂತರ ದೊರಕುವುದು.

ಹಾಸನ ಕ್ಷೇತ್ರಕ್ಕೆ ಕುಡಿಯುವ ನೀರಿನ ಯೋಜನೆಗಳು

2567 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಕ್ಷೇತ್ರದ ಗೇವೇನಹಳ್ಳಿ ಗೊರೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಅಭಿವೃದ್ಧಿಪಡಿಸಿ ನೀರಿನ ತೊಂದರೆಯನ್ನು ನಿವಾರಿಸುವಂತೆ ಎರಡು ವರ್ಷದ ಹಿಂದೆ ಸರ್ಕಾರ ಹಾಸನ ಜಿಲ್ಲಾಪರಿಷತ್‌ನವರಿಗೆ ಆದೇಶಕೊಟ್ಟಿದ್ದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಒಂದೂವರೆ ವರ್ಷಗಳ ಹಿಂದೆ ಪ್ಲಾನ್ ಮತ್ತು ಅಂದಾಜುತಯಾರಿಸಿದ್ದುದು ನಿಜವಲ್ಲವೇ?

ಇ) ಈ ಗ್ರಾಮಗಳಲ್ಲಿನ ಜನರಿಗೆ ತೊಂದರೆ ಇದ್ದರೂ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಇನ್ನೂ ಕಾರ್ಯೋನ್ಮುಖವಾಗದಿರಲು ಕಾರಣಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು

ಆ) 1990-91ನೇ ಸಾಲಿನಲ್ಲಿ ಗೊರೂರು ಮತ್ತು ಗವೇನಹಳ್ಳಿ ಗ್ರಾಮಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಆದೇಶ ನೀಡಲಾಗಿತ್ತು. ಈ ಯೋಜನೆಗಳ ಅಂದಾಜು ಮತ್ತು ನಕ್ಷೆಗಳಿಗೆ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ :30-3-91ರಲ್ಲಿ ನೀಡಲಾಗಿದೆ.

ಇ) ಈ ಕೆಲಸಗಳನ್ನು ಆದಷ್ಟು ಶೀಘ್ರದಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಟಿ. ನರಸೀಪುರ ನಂಜನಗೂಡು ಮುಖ್ಯರಸ್ತೆಯ ರಿಪೇರಿ

2521 - ಶ್ರೀ ಎಂ. ಶ್ರೀನಿವಾಸಯ್ಯ (ಟಿ.ನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: